**ದಿಃ08.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 4ನೇ ಎದುರುದಾರರ ಪರ ಶ್ರೀ.ಕೆ.ಡಿ.ಡಿ ವಕೀಲರಿಂದ ಃ**

ನಾನು ಜೋಡುಪಾಲ ಗ್ರಾಮದ ವಾಸಿ. ನಾನು ಕಟ್ಟಡ ಕಾಮಗಾರಿ ಕೆಲಸ, ತೋಟದ ಕೆಲಸ ಇತ್ಯಾದಿ ಕೆಲಸಗಳನ್ನು ಗುತ್ತಿಗೆ ತೆಗೆದುಕೊಂಡು ಮಾಡಿಸುತ್ತೇನೆ. ನನ್ನ ಕೈಕಳಗೆ 5 ಜನ ಕೆಲಸ ಮಾಡುತ್ತಿದ್ದರು. ಕಾರ್ಮಿಕರು ಕೆಲಸಕ್ಕೆ ಹಾಜರಾದ ಬಗ್ಗೆ ನನ್ನ ಬಳಿ ಹಾಜರಾತಿ ಇರಲಿಲ್ಲ. ನಾನು ಮದೆನಾಡು, ಜೋಡುಪಾಲ, ಬೆಟ್ಟತ್ತೂರು ಮಡಿಕೇರಿ ಇತ್ಯಾದಿ ಕಡೆ ಕೆಲಸ ಮಾಡಿಸುತ್ತೇನೆ. ಬೇರೆ ಬೇರೆ ಕಡೆ ಕೆಲಸ ಮಾಡುವಾಗ ಕೆಲಸದ ಮಾಹಿತಿಗಾಗಿ ಮತ್ತು ಮಾಲೀಕರಿಂದ ಗುತ್ತಿಗೆ ಹಣ ಪಡೆದ ಸಂಬಂಧ ದಾಖಲಾತಿ ಇಡಬೇಕು ಎಂದರೆ ಸಾಕ್ಷಿ ನಾನು ಆ ರೀತಿ ಯಾವುದೇ ದಾಖಲೆ ಇಡುತ್ತಿಲ್ಲ ಎನ್ನುತ್ತಾರೆ. ಕೆಲಸ ಪಡೆಯುತ್ತಿದ್ದ ಮಾಲೀಕರು ಫೋನ್ ಪೇ ಅಥವಾ ಗೂಗಲ್ ಪೇ ಮುಖಾಂತರ ಹಣ ಪಾವತಿ ಮಾಡುತ್ತಿದ್ದರಾ ಎಂದರೆ ಸಾಕ್ಷಿ ನನಗೆ ನಗದು ರೂಪದಲ್ಲಿ ಹಣ ಪಾವತಿ ಮಾಡುತ್ತಿದ್ದರು ಎನ್ನುತ್ತಾರೆ. ನಾನು ಮೇಸ್ತ್ರಿ ಕೆಲಸ ಮಾಡುತ್ತಿದ್ದ ಬಗ್ಗೆ ಆಗಲಿ ಮತ್ತು ನನ್ನ ಕೈಕೆಳಗೆ 5-6 ಜನ ಕೆಲಸ ಮಾಡುತ್ತಿದ್ದ ಬಗ್ಗೆಯಾಗಿ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಮೃತ ಷರತ್ ಈತ ನನ್ನ ಕೈಕೆಳಗೆ ಕೆಲಸ ಮಾಡುತ್ತಿರಲಿಲ್ಲ ಮತ್ತು ಆತನಿಗೆ ನಾನು ನಾನು ಯಾವುದೇ ಕೂಲಿ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ದಿಃ01.10.2023 ರಿಂದ 27.03.2025

ರವರಿಗೆ ಷರತ್ ಈತ ನನ್ನ ಕೈ ಕೆಳಗೆ ಕೆಲಸ ಮಾಡುತ್ತಿದ್ದ ಮತ್ತು ನಾನು ಪ್ರತಿದಿನ 800/- ಕೂಲಿ ಕೊಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ಕಾರ್ಮಿಕರಿಗೆ ಕೂಲಿ ಕೊಟ್ಟ ಬಗ್ಗೆ ಅವರಿಂದ ಯಾವುದೇ ಸ್ವೀಕೃತಿ ಪಡೆಯುತ್ತಿರಲಿಲ್ಲ. ಅರ್ಜಿದಾರನಿಗೆ ಅನುಕೂಲವಾಗಲಿ ಎಂದು ನಿಪಿ.18 ನ್ನು ಸುಳ್ಳಾಗಿ ಸೃಷ್ಟಿಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.18 ಕ್ಕೂ ಮತ್ತು ಮೃತ ಷರತ್ ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಮತ್ತು ಮೃತ ಷರತ್ ನನಗೆ ಅಪಘಾತ ಪೂರ್ವದಲ್ಲಿ ಸುಮಾರು 5 ವರ್ಷಗಳಿಂದ ಪರಿಚಯ ಇದ್ದರು. ಅರ್ಜಿದಾರರು ನನಗೆ ಪರಿಚಯಸ್ಥರಾಗಿದ್ದರಿಂದ ಅವರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ನಿಪಿ.18 ನ್ನು ಸುಳ್ಳಾಗಿ ಸೃಷ್ಟಿಮಾಡಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5ನೇ ಎದುರುದಾರರ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ ಃ**

ನಾನು ಯಾವ ಯಾವ ಮಾಲೀಕರ ತೋಟದಲ್ಲಿ ಮೇಸ್ತ್ರಿ ಕೆಲಸ ಮಾಡಿದೇನೆ ಎಂದು ಹೇಳಲು ನೆನಪಿಲ್ಲ ಎನ್ನುತ್ತಾರೆ. ನಾನು ಯಾರದೇ ತೋಟದಲ್ಲಿ ಮೇಸ್ತ್ರಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪೆಟಿಂಗ್ ಕೆಲಸ ಮಾತ್ರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಷರತ್ ಈತ ನನ್ನ ಕೈ ಕೆಳಗೆ

ಯಾವತ್ತೂ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆತನಿಗೆ ದಿನಒಂದಕ್ಕೆ 800/- ರಂತೆ ಕೂಲಿ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಸಹಾಯ ಮಾಡಬೇಕೆಂದು ನಿಪಿ.18 ನ್ನು ಸುಳ್ಳಾಗಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಸಹಾಯ ಆಗಲಿ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.